# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 21–12–2016 ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ಸಭೆಯ ನಡವಳಿಗಳು**

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಮುಖ್ಯ ಲೆಕ್ಕಾಧಿಕಾರಿಗಳು |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಎಲ್ಲಾ ವಲಯ ಕಾ.ಪಾ.ಅಭಿಯಂತರರು |
| 3. | ಎನ್.ಉಮಾ | – ಸದಸ್ಯರು | ಎ.ಸಿ.ಆಡಿಟ್‌ಸೆಲ್ |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | ಉಪ ಆಯುಕ್ತರು (ಆರ್.ಆರ್.ನಗರ) |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | ಲೆಕ್ಕಾಧೀಕ್ಷಕರುಗಳು |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

ಲೆಕ್ಕ ಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಅಧಿಕಾರಿ/ಸಿಬ್ಬಂದಿಗಳನ್ನು ಸಭೆಗೆ ಸ್ವಾಗತ್ತಿಸುತ್ತಾ, ತಮ್ಮ ತಮ್ಮ ಪರಿಚಯ ಮಾಡಿಕೊಳ್ಳಲು ಕೋರಿದರು. ತತ್ಸಂಬಂಧವಾಗಿ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿ/ಸಿಬ್ಬಂದಿಗಳು ತಮ್ಮ ಪರಿಚಯವನ್ನು ಮಾಡಿಕೊಂಡರು.

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2006–07ನೇ ಸಾಲಿನಿಂದ ಇದುವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಕಾರ್ಯಪಾಲಕ ಅಭಿಯಂತರರುಗಳೊಂದಿಗೆ ಚರ್ಚಿಸುವ ಸಲುವಾಗಿ ಸಭೆಯನ್ನು ನಿಗಧಿಪಡಿಸಿ, ಸಮಿತಿಯು ಸಭೆಯ ತಿಳುವಳಿಕೆ ಪತ್ರವನ್ನು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರುಗಳಿಗೆ ಕಳುಹಿಸಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕಳುಹಿಸಲಾಗಿದ್ದರೂ, ಕೆಲವು

ಕಾರ್ಯಪಾಲಕ ಅಭಿಯಂತರರುಗಳು ಸಭೆಗೆ ಹಾಜರಾಗದೆ ಸ್ಥಾಯಿ ಸಮಿತಿಗೆ ಅಗೌರವ ತೋರಿರುತ್ತಾರೆಂದು ಅಸಮಾಧಾನ ವ್ಯಕ್ತಪಡಿಸಿ, ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಕಾರಣ ಕೇಳಿ ಪತ್ರ ಜಾರಿ ಮಾಡುವಂತೆ ಆಯುಕ್ತರಿಗೆ ಶಿಫಾರಸ್ಸು ಮಾಡುವುದಾಗಿ ತಿಳಿಸಿದರು.

ನಂತರ ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಹಾಜರಿದ್ದ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿ, ಇದುವರೆವಿಗೂ ಲೆಕ್ಕಪರಿಶೋಧನಾ ವರದಿಗೆ ಸಂಬಂಧಿಸಿದಂತೆ ಬಾಕಿ ಇರುವ ಕಂಡಿಕೆಗಳಿಗೆ, ಆಕ್ಷೇಪಣೆ ಹಾಗೂ ವಸೂಲಾತಿಯ ಬಗ್ಗೆ ಯಾವುದೇ ಸಮಿತಿಯಾಗಲೀ ಅಧಿಕಾರಿಗಳಾಗಲೀ ಗಂಭೀರವಾಗಿ ಪರಿಗಣಿಸಿರುವುದಿಲ್ಲವೆಂದು, ಪ್ರಸ್ತುತ ಸಮಿತಿಯು ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ತೀರುವಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕಳೆದ ಸಭೆಯಲ್ಲಿ ಸೂಚಿಸಲಾಗಿದ್ದರೂ ಇದುವರೆವಿಗೂ ಈ ಬಗ್ಗೆ ಯಾವುದೇ ಬೆಳವಣಿಗೆಗಳು ಆಗಿರುವುದಿಲ್ಲವೆಂದು, ಆದ್ದರಿಂದ, ವಿಭಾಗವಾರು ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯ ನಿರ್ವಹಿಸಬೇಕೆಂದು ತಿಳಿಸುತ್ತಾ ಕಾಮಗಾರಿ ಇಲಾಖೆಯಲ್ಲಿನ ಲೆಕ್ಕ ಪರಿಶೋಧನಾ ವರದಿಯ ಒಟ್ಟಾರೆ ಅಂಕಿಅಂಶಗಳ ಮಾಹಿತಿಯನ್ನು ಸಭೆಗೆ ನೀಡಿದರು.

ನಂತರ, ಅಧ್ಯಕ್ಷರು ಮಾತನಾಡುತ್ತಾ ಹಾಜರಿರುವ ಕಾರ್ಯಪಾಲಕ ಅಭಿಯಂತರರಲ್ಲಿ ಯಾರಾದರೊಬ್ಬರು ಕಾಮಗಾರಿ ವಿಭಾಗದ ಕರ್ತವ್ಯ ಮತ್ತು ಜವಾಬ್ದಾರಿಗಳ ವಿವರವನ್ನು ಸಭೆಗೆ ತಿಳಿಸಲು ಸೂಚಿಸಿದಾಗ ಯಲಹಂಕ ವಿಭಾಗದ ಕಾರ್ಯಪಾಲಕ ಅಭಿಯಂತರರು ತಮ್ಮ ಕಾರ್ಯವೈಖರಿಗೆ ಸಂಬಂಧಿಸಿದಂತೆ, ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸುವುದು, ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯುವುದು, ಸಂಬಂಧಿಸಿದ ಅಧಿಕಾರಿಗಳಿಂದ ಕಾಮಗಾರಿ ಸಂಕೇತ ಪಡೆಯುವುದು, ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸುವುದು, ಆಯ್ಕೆಗೊಂಡ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವುದು, ನಂತರದಲ್ಲಿ ಕಾಮಗಾರಿಗಳ ಸ್ಥಳವನ್ನು ವಿವಿಧ ಹಂತದಲ್ಲಿ ಪರಿಶೀಲಿಸುವುದು, ಕಾಮಗಾರಿಗಳು ಮುಕ್ತಾಯಗೊಂಡ ನಂತರ ಕಾಮಗಾರಿಗಳ ಬಿಲ್ಲನ್ನು ಗುತ್ತಿಗೆದಾರರಿಂದ ಪಡೆದು ಹಣ ಪಾವತಿಸುವ ಬಗ್ಗೆ ಕಡತ ಮಂಡಿಸುವುದು, ಸಕ್ಷಮ ಪ್ರಾಧಿಕಾರದಿಂದ ಹಣ ಬಿಡುಗಡೆಯಾದ ನಂತರ ಸಂಬಂಧಿಸಿದ ಗುತ್ತಿಗೆದಾರರಿಗೆ ತಮ್ಮ ವತಿಯಿಂದ ಹಣ ಬಿಡುಗಡೆ ಮಾಡುವ ಮೊದಲು ಶಾಸನಬದ್ಧ ಕಟಾವಣೆ ಮಾಡಿ ಉಳಿದ ಬಿಲ್ಲನ್ನು ಗುತ್ತಿಗೆದಾರರಿಗೆ ನೀಡುವುದು. ಆರ್.ಟಿ.ಐ, ಲೋಕಾಯುಕ್ತ ಹಾಗೂ

ಕಛೇರಿಯಲ್ಲಿನ ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸುವುದಾಗಿ, ವರ್ಷಾಂತ್ಯದಲ್ಲಿ ಸದರಿ ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗುವುದೆಂದು ತಿಳಿಸಿದರು.

ಮೊದಲಿಗೆ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ಕಛೇರಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಕೈಗೊಂಡಿರುವ ಕ್ರಮಗಳ ಮಾಹಿತಿ ಒದಗಿಸಲು ಕೇಳಲಾಗಿ, ಹಾಜರಿದ್ದ ಲೆಕ್ಕಾಧೀಕ್ಷಕರು ತಮ್ಮ ಕಛೇರಿಯಲ್ಲಿ ಸಭೆಯ ತಿಳುವಳಿಕೆ ಪತ್ರವು ಸ್ವೀಕೃತವಾಗಿರುವುದಿಲ್ಲವೆಂದು ತಿಳಿಸಿದರು. ನಂತರ ಸದರಿ ಕಾರ್ಯಪಾಲಕ ಅಭಿಯಂತರರನ್ನು ದೂರವಾಣಿ ಮುಖೇನ ಸಂಪರ್ಕಿಸಲಾಗಿ, ಸದರಿಯವರು ಸಭೆಯ ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಆಗ ಅಧ್ಯಕ್ಷರು ಸಮಿತಿಯು ಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಿ, ತದನಂತರ ವಲಯ ಜಂಟಿ ಆಯುಕ್ತರ ಕಛೇರಿಗೆ ದೂರವಾಣಿ ಮುಖೇನ ಸಂಪರ್ಕಿಸಿ ಸಭೆ ಇರುವ ಬಗ್ಗೆ ಮಾಹಿತಿಯನ್ನು ನೀಡಿ ಸಂಬಂದಪಟ್ಟ ಅಧಿಕಾರಿಗಳನ್ನು ಸಭೆಗೆ ಹಾಜರಾಗುವಂತೆ ಸೂಚಿಸಲಾಗಿದ್ದರೂ, ಸದರಿಯವರು ಸಭೆಗೆ ಹಾಜರಾಗದೆ ಇರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿ, ಸದರಿ ಕಾರ್ಯಪಾಲಕ ಅಭಿಯಂತರರಿಗೆ ಕಾರಣ ಕೇಳಿ ಪತ್ರವನ್ನು ಜಾರಿ ಮಾಡಲು ಸೂಚಿಸಿದರು.

ಮುಂದುವರಿದು ವಲಯವಾರು ಕಾರ್ಯಪಾಲಕ ಅಭಿಯಂತರರುಗಳ ಕಛೇರಿಗಳಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಮಾಹಿತಿಯನ್ನು ಕೇಳಿದಾಗ ಹಾಜರಿದ್ದ ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರುಗಳು ಹಾಗು ಲೆಕ್ಕಾಧೀಕ್ಷಕರುಗಳು ಕೆಲವೊಂದು ಆಕ್ಷೇಪಣಾ ಮೊತ್ತಕ್ಕೆ ವರದಿಯನ್ನು ಸಲ್ಲಿಸಿದ್ದು, ವಸೂಲಾತಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಹಣ ವಸೂಲಾತಿ ಮಾಡಿರುವುದಾಗಿ, ಇನ್ನುಳಿಕೆ ಆಕ್ಷೇಪಣೆ ಮೊತ್ತ ಮತ್ತು ವಸೂಲಾತಿ ಮೊತ್ತ ಸಂಗ್ರಹಿಸುವ ಕಾರ್ಯವು ಪ್ರಗತಿಯಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ನಂತರ ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಮಾತನಾಡುತ್ತಾ ಈಗಾಗಲೇ ಸಮಿತಿಯು ಎಲ್ಲಾ ವಲಯಗಳ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿದ್ದು, ಸದರಿ ಸಭೆಯಲ್ಲಿ ವಲಯ ವ್ಯಾಪ್ತಿಯಲ್ಲಿ ಜಂಟಿ ಆಯುಕ್ತರರರುಗಳು ತಮ್ಮ ಅಧ್ಯಕ್ಷತೆಯಲ್ಲಿ ಲೆಕ್ಕ ಪರಿಶೋಧನಾ ವರದಿಗೆ ಸಂಬಂಧಿಸಿದಂತೆ ಸಭೆಗಳನ್ನು ನಡೆಸಿ, ಸಭೆಯ ನಡವಳಿಗಳೊಂದಿಗೆ ಸಮಿತಿಗೆ ಮಾಹಿತಿ ಸಲ್ಲಿಸಲು ಸೂಚಿಸಲಾಗಿತ್ತು. ದಾಸರಹಳ್ಳಿ ವಲಯವನ್ನು ಹೊರತುಪಡಿಸಿ ಉಳಿದ ಯಾವುದೇ ವಲಯಗಳಲ್ಲಿ ಸಭೆಗಳನ್ನು ನಡೆಸಿರುವ ಬಗ್ಗೆ

ನಡವಳಿಗಳನ್ನು ಸಮಿತಿಗೆ ಸಲ್ಲಿಸಿರುವುದಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿ, ಕೂಡಲೇ ವಲಯ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಸಭೆಯ ನಡವಳಿಗಳೊಂದಿಗೆ ಸಮತಿಗೆ ವರದಿ ಸಲ್ಲಿಸಲು ಸೂಚಿಸಿದರು. ಅಲ್ಲದೆ ಶ್ರೀಯುತ ರಾಜೀವ್ ಚಂದ್ರಶೇಖರ್, ಲೋಕಸಭಾ ಸದಸ್ಯರು ರವರು ಉಚ್ಛ ನ್ಯಾಯಾಲಯದಲ್ಲಿ ಪಾಲಿಕೆಯ ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಗೂ ಮಾಹಿತಿ ಹಕ್ಕು ಕಾರ್ಯಕರ್ತರು ಸಮಿತಿಗೆ ಹಲವಾರು ದೂರುಗಳನ್ನು ಸಲ್ಲಿಸುತ್ತಿರುವುದರಿಂದ, ಈ ಬಗ್ಗೆ ಬೇಜವಾಬ್ದಾರಿತನವನ್ನು ತೋರದೆ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಅಧ್ಯಕ್ಷರು ಸಭೆಯ ಕೊನೆಯಲ್ಲಿ ಸಮಿತಿಯು ಹಿಂದಿನ ಸಭೆಗಳಲ್ಲಿ ಒಂದು ತಿಂಗಳ ಕಾಲಾವಕಾಶವನ್ನು ನೀಡಿ ಲೆಕ್ಕ ಪರಿಶೋಧನಾ ವರದಿಯಲ್ಲಿನ ಬಾಕಿ ಕಂಡಿಕೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ಬಡ್ಡಿಸಹಿತ ವಸೂಲಾತಿ ಮೊತ್ತವನ್ನು 15 ದಿನಗಳೊಳಗೆ ವಸೂಲು ಮಾಡಿ ಸಮಿತಿಗೆ ವರದಿ ಸಲ್ಲಿಸಬೇಕೆಂದು, ಈ ಬಗ್ಗೆ ಮುಂದಿನ ದಿನಗಳಲ್ಲಿ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಿದ್ದು, ಈ ನಿಟ್ಟಿನಲ್ಲಿ ಎಲ್ಲರೂ ಅಗತ್ಯ ಸಹಕಾರ ನೀಡಬೇಕೆಂದು ತಿಳಿಸುತ್ತಾ, ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**
**ಲೆಕ್ಕಪತ್ರ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
6.ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
6.ಮುಖ್ಯ ಲೆಕ್ಕಾಧಿಕಾರಿಯವರ ಮಾಹಿತಿಗಾಗಿ
7.ಕಛೇರಿ ಕಡತಕ್ಕೆ